ಯಲಾ ಯಲಾ ನಮ್ಮ ರಾಜನೇ ಸೋತಂತೆ ಆಯಿತಲ್ಲಾ, ಪಂಥದಂತೆ ರಾಜನೇ ವನವಾಸ ಹೋಗಬೇಕಾಯಿತಲ್ಲ, ನಮಗೆ ಇನ್ನು ಯಾರು ದಿಕ್ಕು ಎಂದು ಯೋಚಿಸಿ ಆಯ್ತು ಕೂಗ್ತಾ ಇರುವುದು ಗಂಡು ಬೇರುಂಡವೇ ಅಂದುಬಿಡುವುದೇ ಸೈ ಅಂತ ಮಾತಾಡಿಕೊಂಡು ಬಂದ ಭಂಟರು ರಾಜನ ಕೂಡ ಮಹಾಸ್ವಾಮಿ ಅಲ್ಲಿ ಕೂಗುತ್ತಿದ್ದುದು ಗಂಡುಪಕ್ಷಿಯೇ ಅಂದುಬಿಟ್ಟರು. ಆಗ ರಾಜ ಹೆಂಡತಿಗೆ ನೋಡಿದೆಯಾ ನೀಲಾವತಿ ತಿಳಿದೇನೆ ನೀನು ಹೆಂಗಸಾಗಿ ನನ್ನಂಥ ಗಂಡಸಿನ ಮುಂದೆ ಪಂಥ ಕಟ್ಟಿ ಸೋತು ಬಿಟ್ಟೆ, ಈಗೇನು ಮಾಡ್ತೀಯಾ ಅಂದ. ನೀಲಾವತಿ, ಸ್ವಾಮಿ ಮುತ್ತು ಒಡೆದರೆ ಹೋಯಿತು, ಮಾತು ಆಡಿದರೆ ಮುಗಿಯಿತು. ನಾನು ಈಗಿಂದೀಗಲೇ ವನವಾಸಕ್ಕೆ ಹೋಗುವವಳೇ ಸರಿ ಎಂದುಬಿಟ್ಟಳು. ರಾಜನಾದರೋ ಬೇಡ ನೀಲಾವತಿ, ಈಗ ನೀನು ಗರ್ಭಿಣಿ, ಪಂಥ ವಾಪಸು ತಗೋ, ನಿನ್ನ ತೌರು ಮನೆ ಕಡೆ ಹೋಗಾನ ಅಂತ ಹೇಳಿದ. ನೀಲಾವತಿ ಕೇಳಲಿಲ್ಲ. ಈಗಲೂ ನನ್ನ ಮನಸ್ಸಿನಲ್ಲಿ ಕೂಗಿದ್ದು ಹೆಣ್ಣು ಬೇರುಂಡವೇ ಅಂತ ಅನ್ನಿಸುತ್ತಲಿದೆ, ಆದದ್ದು ಆಯಿತು ಅಂತ ವನಾಂತರದ ಕಡೆಗೆ ನಡೆದೇಬಿಟ್ಟಳು.

ಇನ್ನೇನಪ್ಪಾ ಮಾಡದು ಅಂದುಕೊಂಡು ರಾಜ ಅರಮನೆ ಕಡೆ ವಾಪಸಾದ. ಇತ್ತ ಕಡೆ ರಾಣಿ, ಗರ್ಭಿಣಿ ಹೆಂಗಸು ಒಬ್ಬಳೇ ಅಡವಿ ಅರಣ್ಯದೆಡೆ ಬರುತ್ತಿರುವಳು. ಅಲ್ಲೊಬ್ಬ ಮುನಿ ತಪಸ್ಸು ಮಾಡುತ್ತಿದ್ದ. ತಪಸ್ಸು ಎಂದರೆ ಅದು ಅಂತಿಂಥ ತಪಸ್ಸಲ್ಲ. ಒಂಬತ್ತು ಸೂಜಿ, ಒಂಬತ್ತು ದಬ್ಬಳ, ಒಂಬತ್ತು ರುದ್ರಾಕ್ಷಿ ಅದರ ಮೇಲೆ ತಲೆ ಇಟ್ಟು ಕಾಲು ಮೇಲೆ ಮಾಡಿ ಘನಘೋರ ತಪಸ್ಸು ಮಾಡುತ್ತಿದ್ದ. ಗರ್ಭಿಣಿ ಹೆಂಗಸು ನಡಕೊಂಡು ಬರ್ತಾ ಇರುವುದನ್ನು ಕಂಡು ಆಹಾ ಈ ಬಸುರಿ ಹೆಂಗ್ಸು ಒಬ್ಬಳೇ ಅಲೆದು ಅತ್ತಿಕಾಯಾಗಿ ಇತ್ತ ಬರುತ್ತಿರುವಳು. ಇವಳ ಭಂಗಕ್ಕಿಂತ ನನ್ನ ತಪಸ್ಸು ಹೆಚ್ಚೇ, ಅಂದುಕೊಂಡು ನೀಲಾವತಿ ಮುಂದೆ ಬಂದವನೇ ತಾಯಿ ನಿಂದು ಯಾವೂರು, ಯಾವ ರಾಜನ ಹೆಣ್ತಿ, ಇಲ್ಲಿ ಯಾಕೆ ಹಿಂಗೆ ಒಬ್ಬಳೇ ಬರುತ್ತಿದ್ದೀಯಲ್ಲ ಅಂತ ಕೇಳಿದ. ಆಗ ನೀಲಾವತಿ ಸ್ವಾಮಿ ಪಂಥ ಕಟ್ಟಿ ಸೋತು ವನವಾಸಕ್ಕೆ ಬಂದಿರೋ ಪಾಪಿ ಹೆಂಗಸು ನಾನು ಹೀಗೇ ಮುಂದೆ ಹೋಗ್ತೀನಿ. ಬದುಕಬೇಕು ಅಂತ ಹಣೇಲಿ ಬರೆದಿದ್ರೆ ಬದುಕುವೆ, ಇಲ್ಲದಿದ್ದರೆ ಸಾಯುವೆ ಅಂದಳು. ಆಗ ಋಷಿ ಸಾಯುವ ಮಾತು ಆಡಬೇಡ, ಹೊಟ್ಟೆಯಲ್ಲಿರುವ ಕೂಸನ್ನು ಹುಟ್ಟುವ ಮೊದಲೇ ಸಾಯಿಸುವುದುಂಟೆ, ಹುಟ್ಟುವ ಮಗುವಿನ ಪುಣ್ಯವೇನೋ ಪುರುಷಾರ್ಥವೇನೊ ಯಾರಿಗೆ ಗೊತ್ತುಂಟು. ಈಗ ನೀನು ಇಲ್ಲಿಂದ ಸ್ವಲ್ಪ ದೂರ ಹೋಗು. ಅಲ್ಲೊಂದು ಆಶ್ರಮ ಉಂಟು. ಮುನಿ ಮಹಾತ್ಮನಿರುವನು. ನಿನಗೆ ಅಲ್ಲಿ ಸಕಲವೂ ಸರಾಗವಾಗುವುದು ಎಂದು ಹೇಳಿದ.

ನೀಲಾವತಿ ಆ ಮುನಿಗೆ ಶರಣು ಮಾಡಿ ಮುಂದೆ ಮುಂದೆ ನಡೆದುಕೊಂಡು ಬಂದಳು. ನಡಿಯಲಾರದೆ ಅಲ್ಲೊಂದು ಮರದ ಕೆಳಗೆ ಉಸ್ಸಪ್ಪಾ ಅಂತ ಕೂತುಬಿಟ್ಟಳು. ಅಷ್ಟು ಹೊತ್ತಿಗೆ ಅವಳ ಕರ್ಣಪಟಲಕ್ಕೆ ನಿಂದು ಯಾವೂರವ್ವಾ ಮಗಳೇ ಎನ್ನುವ ದನಿ ಕೇಳಿಸಿತು. ಕಣ್ಣು ಬಿಟ್ಟು ನೋಡಿದಳು. ಕೈಯ್ಯಲ್ಲಿ ಜೋಳಿಗೆ ಬೆತ್ತ ಹಿಡಿದುಕೊಂಡು ನಿಂತಿದ್ದ ಒಬ್ಬ ಜಂಗುಮಯ್ಯ! ಬಾ ಮಗಳೇ, ನೋಡಿದರೆ ದಿನಾ ತುಂಬಿದ ಗರ್ಭಿಣಿಯಾಗಿದೀಯೇ. ಇಲ್ಲೇ ನನ್ನ ಗುಡಿಸಿಲಲ್ಲಿ ನಾಕು ದಿನ ಇದ್ದು ಸುಧಾರಿಸಿಕೊಂಡು ಇರುವಂಥವಳಾಗು ಅಂತ ಕರೆದ. ನೀಲಾವತಿಗೂ ಒಂದು ನೆಲೆ ಸಿಕ್ಕಿದರೆ ಸಾಕಪ್ಪಾ ಅನ್ನುವಂಗಾಗಿತ್ತು. ಇನ್ನೆಷ್ಟು ದೂರ ನಡಿಯನಪ್ಪಾ ಅಂತೇಳಿ ಆ ಜಂಗಮಯ್ಯನ ಆಶ್ರಮಕ್ಕೆ ಬಂದಳು. ಅಲ್ಲಿಗೆ ಬಂದ ವಾರ ಒಪ್ಪೊತ್ತಿನಲ್ಲೇ ನೀಲಾವತಿಗೆ ಮೈಕೈ ನೋವು ಹತ್ತಿಕೊಂಡಿತು. ಕೀಲು, ಕೀಲೆಲ್ಲ ಮುರಿಯುವಂಗಾಗಿ ಬಸಿರುಬ್ಯಾನೆ ಎದ್ದುಕೊಂಡಿತು. ಆಗ ಜಂಗುಮಯ್ಯ ಅಡವಿ ಅರಣ್ಯದಾಚೆ ಇದ್ದ ಹಳ್ಳಿಗೆ ಹೋಗಿ ಒಬ್ಬಳು ಸೂಲಗಿತ್ತಿಯನ್ನು ಕರೆತಂದ.